## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ8176/2023

ಸಿ.ಡಬ್ಲ್ಯೂ-4 ಪಿ.ಡಬ್ಲ್ಯೂ-3

| | | |
|---|---|---|
| ಹೆಸರು | ಃ | ಬಸವರಾಜ |
| ತಂದೆಃಗಂಡ | ಃ | ಕರಿಯಪ್ಪ ಕೊಡಗುಂಟಿ |
| ವಯಸ್ಸು | ಃ | 45 ವರ್ಷ |
| ಉದ್ಯೋಗ | : | ಪ್ರೊಫಸರ ಸಿಯುಕೆ |
| ವಾಸಸ್ಥಳ | ಃ | ಕಡಗಂಚಿ |

ದಿನಾಂಕಃ26.10.2024
ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-1 ರಿಂದ 3, 5 ಪರಿಚಯ ಇರುತ್ತದೆ. ದಿ.02.08.2023 ರಂದು ಬೆಳಗ್ಗೆ 10.00 ಗಂಟೆ ಸುಮಾರಿಗೆ ಅಳಿವಿನ ಅಂಚಿನಲ್ಲಿರುವ ಭಾಷೆಗಳ ಅಧ್ಯಯನ ಕೇಂದ್ರದಲ್ಲಿ ನಾನು ಹೋದಾಗ ಸದರಿ ಕೇಂದ್ರವು ಬೀಗ ಮುರಿದಿದ್ದು, ಆಗ ನಾನು ಚಾಸಾ-1, 5 ರವರಿಗೆ ದೂರವಾಣಿ ಮೂಲಕ ವಿಷಯ ತಿಳಿಸಿ ಅವರು ಬಂದು ಬಾಗಿಲು ತೆರೆದು ಹೋಗಿ ನೋಡಿದಾಗ 3 ಸಿಪಿಯು ಮತ್ತು 2 ಮಾನಿಟರಗಳು ಕಳುವಾಗಿದ್ದು ತಿಳಿದುಬಂದಿರುತ್ತದೆ. ನಂತರ ಪೋಲಿಸರಿಗೆ ಕರೆ ಮಾಡಿ ವಿಷಯ ತಿಳಿಸಿದ ಮೇಲೆ ಅವರು ಬಂದು ಮಾಹಿತಿ ಪಡೆದುಕೊಂಡು, ನಮ್ಮ ಸಿಬ್ಬಂದಿಗಳ ಬಗ್ಗೆ ವಿಚಾರಿಸಿದ್ದು ಮತ್ತು ಯಾರಾದರೂ ಕೆಲಸ ಬಿಟ್ಟು ಹೋಗಿರುತ್ತಾರಾ ಎಂದು ವಿಚಾರಿಸಿದಾಗ ನಾವು ಅವರಿಗೆ ಅವರ ಹೆಸರು ಮತ್ತು ದೂರವಾಣಿ ಸಂಖ್ಯೆ ನೀಡಿರುತ್ತೇವೆ. ಸಾಕ್ಷಿಯು ಅವರ ಹೆಸರು ಸೂರ್ಯಮಣಿಕುಮಾರ ಎಂದು ತಿಳಿಸಿರುತ್ತೇವೆ ಎಂದು ನುಡಿಯುತ್ತಾರೆ. ಮರುದಿನ ಚಾಸಾ-1 ರವರು ನನಗೆ ಕರೆ ಮಾಡಿ ಬರಲು ಹೇಳಿದ್ದರಿಂದ ನಾನು ನಾನು ಚಾಸಾ-1 ರವರ ಕಚೇರಿಗೆ ಹೋದಾಗ ಅಲ್ಲಿ ಪೋಲಿಸರು ಆರೋಪಿಯೇ ಕಳ್ಳತನ ಮಾಡಿರುತ್ತಾನೆ ಎಂದು ತೋರಿಸಿರುತ್ತಾರೆ. ಸಾಕ್ಷಿಯು ಈಗಾಗಲೇ ಗುರುತಿಸಲಾದ ಮು.ಮಾ.1 ರಿಂದ 5 ನ್ನು ನೋಡಿ ಗುರುತಿಸುತ್ತಾರೆ. ನ್ಯಾಂಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ.01.08.2023 ರಂದು ರಾತ್ರಿ 11.30 ರಿಂದ 12.00 ಗಂಟೆ ಮದ್ಯದಲ್ಲಿ ಕಳ್ಳತನವಾಗಿರುತ್ತದೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ**

ನಾನು ಕೇಂದ್ರಿಯ ವಿಶ್ವವಿದ್ಯಾಯಲಯದಲ್ಲಿ ಘಟನೆ ನಡೆದ ಸಮಯದಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ದಾಖಲೆಯನ್ನು ಪೋಲಿಸರಿಗೆ ನೀಡಿರುವುದಿಲ್ಲ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇದೇ ಮೊದಲನೇ

ಬಾರಿಗೆ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಕೇಂದ್ರಿಯ ವಿಶ್ವವಿದ್ಯಾಯಲಯದಲ್ಲಿ ಹಲವಾರು ವಿಭಾಗಗಳು ಇದ್ದು ಅಲ್ಲಿ ಹಲವಾರು ಕಂಪ್ಯುಟರಗಳು ಇರುತ್ತವೆ ಎಂದರೆ ಸರಿ. ಚಾಸಾ-1 ರವರು ಸದರಿ ಮು.ಮಾ.ಗಳು ವಿಶ್ವವಿದ್ಯಾಲಯದ ಅಳಿವಿನ ಅಂಚಿನಲ್ಲಿರುವ ಭಾಷೆಗಳ ಅಧ್ಯಯನ ಕೇಂದ್ರದ್ದು ಎಂದು ತೋರಿಸಲು ದಾಖಲೆಯನ್ನು ನೇಡಿರುತ್ತಾರೆ ಮತು ಸದರಿ ಮು.ಮಾ.ಗಳ ಕೇಂದ್ರಿಯ ವಿಶ್ವವಿದ್ಯಾಲಯಲದ ಆಸ್ತಿ ಎಂದು ತೋರಿಸಲು ದಾಖಲೆಗಳನ್ನು ನೀಡಿರುತ್ತಾರೆ. ಒಟ್ಟು ಮೂರು ಬಾಗಿಲುಗಳ ಬೀಗ ಮುರಿದಿದ್ದು ಎರಡು ಕೋಣೆಗಳಲ್ಲಿ ಯಾವುದೇ ಕಂಪ್ಯೂಟರಗಳು ಇರಲಿಲ್ಲ.ಕೇಂದ್ರಿಯ ವಿಶ್ವವಿದ್ಯಾಲಯದ ಸೆಕ್ಯೂರಿಟಿ ಗಾರ್ಡಗಳು ಆರೋಪಿಯೇ ಕಳ್ಳತನ ಮಾಡಿದ್ದಾನೆ ಎಂದು ಹೇಳಿರುವುದಿಲ್ಲ. ಕೇಂದ್ರಿಯ ವಿಶ್ವವಿದ್ಯಾಲಯದ ಸಿ.ಸಿ.ಟಿವಿ ಗಳಲ್ಲಿ ಆರೋಪಿಯೇ ಕಳ್ಳತನ ಮಾಡಿ ಹೋಗಿರುತ್ತಾನೆ ಎಂದು ನಮೂದಾದ ಬಗ್ಗೆ ದಾಖಲೆ ನೀಡಿದ್ದಿರಾ ಎಂದರೆ ಸಾಕ್ಷಿಯು ಅಳಿವಿನ ಅಂಚಿನಲ್ಲಿರುವ ಭಾಷೆಗಳ ಅಧ್ಯಯನ ಕೇಂದ್ರಕ್ಕೆ ಯಾವುದೇ ಸಿ.ಸಿ.ಟಿವಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಅಧ್ಯಯನ ಕೇಂದ್ರವು ಕೇಂದಿರಯ ವಿಶ್ವವಿದ್ಯಾಲಯದ ಮುಖ್ಯ ಮಹಡಿಯ ಹಿಂದೆಯೇ ಇರುತ್ತದೆ ಎಂದರೆ ಸರಿ. ಸದರಿ ಅಧ್ಯಯನ ಕೇಂದ್ರಕ್ಕೆ ಮುಖ್ಯ ದ್ವಾರದ ಮುಖಾಂತರ ಹೋಗಬೇಕು ಎಂದರೆ ಸರಿ. ಮುಖ್ಯ ಮಹಡಿಗೆ ಎಲ್ಲ ಕಡೆಯೂ ಸಿ.ಸಿ.ಟಿವಿ ಕ್ಯಾಮರಾಗಳು ಇರುತ್ತವೆ ಎಂದರೆ ಸರಿ. ನಾನು ಆರೋಪಿಯೇ ಕಳ್ಳತನ ಮಾಡಿರುತ್ತಾನೆ ಎಂದು ವಿಚಾರಿಸಲು ಸದರಿ ಸಿ.ಸಿ.ಟಿವಿಗಳನ್ನು ಪರಿಶೀಲನೆ ಮಾಡಿರುವುದಿಲ್ಲ ಸಾಕ್ಷಿ ಮುಂದುವರೆದು ನನಗೆ ಆ ಅಧಿಕಾರ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಘಟನೆ ನಡೆಯುವುದಕ್ಕಿಂತ ಮುಂಚೆ ನಮ್ಮ ಬಳಿ ಕೆಲಸ ಮಾಡಿರುತ್ತಾನೆ ಎಂದರೆ ಸರಿ. ಆರೋಪಿಗೆ ನಮ್ಮ ಅದ್ಯಯನ ಕೇಂದ್ರಕ್ಕೆ ಹೋಗಿ ಬರಲು ಪರವಾನಿಗೆ ಇತ್ತು ಎಂದರೆ ಸರಿ. ಆರೋಪಿಯನ್ನುಯಾವ ಕಾರಣಕ್ಕೆ ಕೆಲಸದಿಂದ ತೆಗೆದುಹಾಕಿರುತ್ತಾರೆ ಎಂದು ನನಗೆ ಅಧಿಕೃತವಾಗಿ ಗೊತ್ತಿಲ್ಲ. ಚಾಸಾ-1 ರವರು ಫಿರ್ಯಾದಿದಾರರು ಇದ್ದು ಸದರಿ ಫಿರ್ಯಾದಿಯಂತೆ ನಾನು ಸಾಕ್ಷಿ ಹೇಳಲು ಬಂದಿರುತ್ತೇನೆ ಎಂದರೆ ಸರಿ. ಚಾಸಾ-1 ರವರು ಆರೋಪಿಯನ್ನು ಕೆಲಸದಿಂದ ತೆಗೆದುಹಾಕಿದ ಕಾರಣ ಅವರ ಮದ್ಯ ವೈಮನಸ್ಸಿ ನಿಂದ ಆರೋಪಿ ವಿರುದ್ಧ ಚಾಸಾ-1 ರವರು ದೂರು ನೀಡಿದ್ದು ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲ ಮು.ಮಾ.ಗಳನ್ನು ಒಬ್ಬರಿಂದ ತೆಗೆದುಕೊಂಡು ಹೋಗಲು ಆಗುವುದಿಲ್ಲ ಎಂದರೆ ಸರಿಯಲ್ಲ ಚಾಸಾ-1 ರವರು ಆರೋಪಿ ವಿರುದ್ದ ಸುಳ್ಳು ದೂರು ನೀಡಿದ್ದು ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿ.02.08.2023 ರಂದು ಬೆಳಗ್ಗೆ 10.00 ಗಂಟೆ ಸುಮಾರಿಗೆ ಅಳಿವಿನ ಅಂಚಿನಲ್ಲಿರುವ ಭಾಷೆಗಳ ಅಧ್ಯಯನ ಕೇಂದ್ರದಲ್ಲಿ ನಾನು ಹೋದಾಗ ಸದರಿ ಕೇಂದ್ರವು ಬೀಗ ಮುರಿದಿದ್ದು, ಆಗ ನಾನು ಚಾಸಾ-1, 5 ರವರಿಗೆ ದೂರವಾಣಿ ಮೂಲಕ ವಿಷಯ ತಿಳಿಸಿ ಅವರು ಬಂದು ಬಾಗಿಲು ತೆರೆದು ಹೋಗಿ ನೋಡಿದಾಗ 3 ಸಿಪಿಯು ಮತ್ತು 2 ಮಾನಿಟರಗಳು ಕಳುವಾಗಿದ್ದು ತಿಳಿದುಬಂದಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಪೋಲಿಸರಿಗೆ ಕರೆ ಮಾಡಿ ವಿಷಯ ತಿಳಿಸಿದ ಮೇಲೆ ಅವರು ಬಂದು ಮಾಹಿತಿ ಪಡೆದುಕೊಂಡು, ನಮ್ಮ ಸಿಬ್ಬಂದಿಗಳ ಬಗ್ಗೆ ವಿಚಾರಿಸಿದ್ದು ಮತ್ತು ಯಾರಾದರೂ ಕೆಲಸ ಬಿಟ್ಟು ಹೋಗಿರುತ್ತಾರಾ ಎಂದು ವಿಚಾರಿಸಿದಾಗ ನಾವು ಅವರಿಗೆ ಅವರ ಹೆಸರು ಮತ್ತು ದೂರವಾಣಿ ಸಂಖ್ಯೆ ನೀಡಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅವರ ಹೆಸರು ಸೂರ್ಯಮಣಿಕುಮಾರ ಎಂದು ತಿಳಿಸಿರ ುತ್ತೇವೆ ಎಂದು ನುಡಿಯುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮರುದಿನ ಚಾಸಾ-1 ರವರು ನನಗೆ ಕರೆ ಮಾಡಿ ಬರಲು ಹೇಳಿದ್ದರಿಂದ ನಾನು ನಾನು ಚಾಸಾ-1 ರವರ ಕಚೇರಿಗೆ ಹೋದಾಗ

ಅಲ್ಲಿ ಪೋಲಿಸರು ಆರೋಪಿಯೇ ಕಳ್ಳತನ ಮಾಡಿರುತ್ತಾನೆ ಎಂದು ತೋರಿಸಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

ಓ.ಹೇ.ಕೇ.ಸರಿ ಇದೆ.

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಆಳಂದ**